ಶ್ರೀ ಪಿ.ಜಿ.ಆರ್.ಸಿಂಧ್ಯ (ಸಾರಿಗೆ ಸಚಿವರು):

ಅ) ಸದ್ಯಕ್ಕೆ ಹುಬ್ಬಳ್ಳಿಯಲ್ಲಿ ಮಿನಿ ಬಸ್‌ನಿಲ್ದಾಣ ನಿರ್ಮಿಸಲು ನಗರದ ಒಂದು ಪ್ರಮುಖ ಭಾಗವಾದ ಕೃಷ್ಣಪುರ ಪ್ರದೇಶದಲ್ಲಿ ಹೆಗ್ಗೇರಿ ದವಾಖಾನೆಯ ಬಳಿ ಮೂರು ಎಕರೆ ಜಾಗವನ್ನು ಒದಗಿಸಲು ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯನ್ನು ಕೋರಲಾಗಿದೆ.

ಜಾಗವು ದೊರೆತ ನಂತರ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ವಿಷಯ: ಕಳ್ಳಂಬೆಳ್ಳ ಕ್ಷೇತ್ರದಲ್ಲಿ ಆಶ್ರಯ ಯೋಜನೆಯಡಿಯಲ್ಲಿ ನಿವೇಶನಗಳ ಹಂಚಿಕೆ.

2624 (3275)

ಶ್ರೀ ಟಿ.ಬಿ.ಜಯಚಂದ್ರ (ಕಳ್ಳಂಬೆಳ್ಳ): ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳ್ಳಂಬೆಳ್ಳ ಕ್ಷೇತ್ರದ ಹಾಗಲವಾಡಿ ಹೋಬಳಿ ಮಂಚಲದೊರೆ ಗ್ರಾಮ ಪಂಚಾಯಿತಿ ಮತ್ತು ಇನ್ನು ಅನೇಕ ಗ್ರಾಮ ಪಂಚಾಯತಿ ವ್ಯಾಪ್ತಿಗೆ ಬರುವ ಹಳ್ಳಿಗಳಲ್ಲಿ ಆಶ್ರಯ ಯೋಜನೆ ಅಡಿಯಲ್ಲಿ ನಿವೇಶನಗಳನ್ನು ಹಂಚಲು ಜಮೀನು ಬಡಾವಣೆಗಳನ್ನು ಮಾಡಿದ್ದರೂ ಬಡವರಿಗೆ ನಿವೇಶನಗಳನ್ನು ಇದುವರೆವಿಗೂ ಹಂಚದೇ ಇರುವ ತೊಂದರೆಗಳೇನು?

ಆ) ಈ ಬಗ್ಗೆ ನಿವೇಶನ ರಹಿತರಿಗೆ ನಿವೇಶನ ಹಂಚಲು ಸೂಕ್ತ ಹಾಗೂ ಶೀಘ್ರ ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಹೆಚ್.ಡಿ.ರೇವಣ್ಣ (ವಸತಿ ಸಚಿವರು):

ಅ) ಆಡಳಿತಾತ್ಮಕ ತೊಂದರೆಗಳಿಂದ ನಿವೇಶನಗಳನ್ನು ಹಂಚಲು ವಿಳಂಬವಾಗಿದ್ದು, ಅವುಗಳನ್ನು ಶೀಘ್ರವಾಗಿ ಹಂಚಲು ಕ್ರಮ ಕೈಗೊಳ್ಳಲಾಗಿದೆ.

ಆ) ಹೌದು. ನಿವೇಶನ ರಹಿತರಿಗೆ ನಿವೇಶನಗಳನ್ನು ಹಂಚಲು ಸೂಕ್ತ ಹಾಗೂ ಶೀಘ್ರ ಕ್ರಮ ಕೈಗೊಳ್ಳಲಾಗುವುದು.

ವಿಷಯ: ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಧರ್ಮಪೀರ ಫಾರಂ ಅವ್ಯವಹಾರ.

2625 (3638)

ಶ್ರೀ ಟಿ.ಬಿ.ಜಯಚಂದ್ರ (ಕಳ್ಳಂಬೆಳ್ಳ): ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿರುವ ಧರ್ಮವೀರ ಫಾರಂಗೆ ಪ್ರಾರಂಭದಿಂದ ಇದುವರೆವಿಗೂ ಖರ್ಚು ಮಾಡಿರುವ ಹಣದ ಮೊತ್ತವೆಷ್ಟು?

ಆ) ಅದರಲ್ಲಿ ಬರುತ್ತಿರುವ ಆದಾಯವೆಷ್ಟು? ಹಾಗೂ ವಾರ್ಷಿಕ ಖರ್ಚು ಎಷ್ಟು?

ಇ) ಇಲ್ಲಿ ಹಣ ದುರುಪಯೋಗ : ಅವ್ಯವಹಾರವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಈ ಫಾರಂ ಅಭಿವೃದ್ಧಿಗಾಗಿ ಸರ್ಕಾರದ ಯೋಜನೆಗಳು ಏನು?

ಶ್ರೀ ಡಿ.ಟಿ.ಜಯಕುಮಾರ್ (ತೋಟಗಾರಿಕೆ ರಾಜ್ಯಸಚಿವರು):

ಅ) 1971ರಿಂದ ಇಲ್ಲಿಯವರೆಗೆ (ಅಂದರೆ 1996ರವರೆವಿಗೆ) ರೂ.232.56 ಲಕ್ಷಗಳನ್ನು ಖರ್ಚುಮಾಡಿದೆ.

ಆ) 1996-97 ಸಾಲಿನಲ್ಲಿ ರೂ.18.42 ಲಕ್ಷ ವ್ಯಯಿಸಲಾಗಿದ್ದು, ರೂ.20,593.00 ಆದಾಯವು ಬಂದಿರುತ್ತದೆ.

ಇ) ಇಲ್ಲ.

ಈ) ಈ ಕ್ಷೇತ್ರದ ಅಭಿವೃದ್ಧಿಗಾಗಿ ಒಂದು ಉನ್ನತ ಮಟ್ಟದ ತಾಂತ್ರಿಕ ಸಲಹಾ ಸಮಿತಿಯನ್ನು ರಚಿಸಿದ್ದು, ಈ ಸಮಿತಿಯ ಸಲಹೆ ಪ್ರಕಾರ ಈ ಕ್ಷೇತ್ರದಲ್ಲಿ ನೀರಿನ ತೀವ್ರ ಅಭಾವವಿರುವುದರಿಂದ ತೆಂಗು ಬೆಳೆಯನ್ನು 25 ಎಕರೆ ಪ್ರದೇಶಕ್ಕೆ ಮಾತ್ರ ಸೀಮಿತಗೊಳಿಸಿ ಉಳಿದ ತೆಂಗಿನ ತೋಟದ ಬದಲು ಆ ಸ್ಥಳಗಳಲ್ಲಿ ಒಣ ತೋಟಗಾರಿಕಾ ಬೆಳೆಗಳಾದ ಮಾವು, ಹುಣಸೆ, ಹಲಸು, ಗೋಡಂಬಿ, ಸೀತಾಫಲ, ಇತ್ಯಾದಿಗಳನ್ನು ಬೆಳೆಸಲು ಕ್ರಮ ಏರ್ಪಡಿಸಲಾಗಿದೆ. ಈಗಾಗಲೇ 80ಎಕರೆ ಪ್ರದೇಶದಲ್ಲಿ ಮಾವು ಮತ್ತು ಸಪೋಟ ಗಿಡಗಳನ್ನು ನೆಡಲಾಗಿದೆ. ಅಲ್ಲದೇ ಉಳಿದ ಪ್ರದೇಶದಲ್ಲಿಯೂ ಕೂಡ ಒಣ ತೋಟಗಾರಿಕೆ ಬೆಳೆಗಳನ್ನು ಹಂತ ಹಂತವಾಗಿ ಅಭಿವೃದ್ಧಿಪಡಿಸಲು ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ವಿಷಯ: ಬೀದಿ ಮಕ್ಕಳ ಪುನರ್ವಸತಿ

2630 (3933)

ಶ್ರೀ ಕೆ.ಜಯರಾಮಶೆಟ್ಟಿ (ಉಳ್ಳಾಲ): ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ